ಶ್ರೀ ಬಿ. ಶ್ರೀರಾಮುಲು: ಆದಷ್ಟು ಬೇಗನೆ ಎಲ್ಲಾ ಶಾಸಕರನ್ನು ಕರೆದು ಸಭೆಯನ್ನು ನಡೆಸಿ ಕೆ.ಸಿ. ಜನರಲ್ ಆಸ್ಪತ್ರೆ, ವಿಕ್ಟೋರಿಯಾ, ಬೌರಿಂಗ್ ಅಥವಾ ಇನ್ಯಾವುದೇ ಆಸ್ಪತ್ರೆಗಳಲ್ಲಿ ವೈದ್ಯರ, ನರ್ಸ್‌ಗಳ ಕೊರತೆ ಇರಬಹುದು ಹಾಗೂ ಬಡವರಿಗೆ ಯಾವ ರೀತಿಯ ಸೌಲಭ್ಯ, ಚಿಕಿತ್ಸೆ ಸಿಗಬೇಕು, ಎನ್ನುವುದರ ಬಗ್ಗೆ ಚರ್ಚೆ ಮಾಡೋಣ. ಮೊನ್ನೆ ನಾನು ಕೆ.ಸಿ. ಜನರಲ್ ಆಸ್ಪತ್ರೆಗೆ ಹೋಗಿದ್ದೆ ಅಲ್ಲಿ ಬಡವರು ಬಹಳ ನೋವನ್ನು ಪಟ್ಟರು. ಆಗ ನಾನು ಅಲ್ಲಿದ್ದ ವೈದ್ಯರಿಗೆ ಈ ರೀತಿ ಮುಂದೆ ನಡೆದುಕೊಳ್ಳಬಾರದು. ಮುಂಬರುವ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರು ನೋವು ಪಡಬಾರದು ಎನ್ನುವ ವಿಷಯ ತಿಳಿಸಿದೆ. ಆದಷ್ಟು ಬೇಗನೆ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಾಗಿ ತಿಳಿಸುತ್ತೇನೆ.

ವಿದ್ಯಾರ್ಥಿ ನಿಲಯಗಳಲ್ಲಿ ಸಿಬ್ಬಂದಿ ನೇಮಕಾತಿ

68:– ಶ್ರೀ ಕುಮಾರಸ್ವಾಮಿ ಹೆಚ್.ಕೆ.:–ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ:ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ 3ನೇ ದರ್ಜೆ ಮತ್ತು 4ನೇ ದರ್ಜೆ ಹುದ್ದೆಗಳ ಸಂಖ್ಯೆ ಎಷ್ಟು?

(ಆ) ಖಾಲಿ ಇದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು;

(ಇ) ಈ ನಿಲಯಗಳಲ್ಲಿ ಬೆಲೆ ಏರಿಕೆಗೆ ಅನುಗುಣವಾಗಿ ಮಾಸಿಕ ನಿರ್ವಹಣ ವೆಚ್ಚವನ್ನು ಹೆಚ್ಚಿಸಲಾಗುವುದೆ?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು):–

ಸಮಾಜ ಕಲ್ಯಾಣ ಇಲಾಖೆ:

I	ಸಮೂಹ	1) ಸೀನಿಯರ್ ವಾರ್ಡನ್	–	27
	–ಸಿ	2) ವಾರ್ಡನ್	–	449
II	ಸಮೂಹ	1) ಅಡುಗೆಯವರು	–	1148
	ಡಿ	2) ಅಡುಗೆ ಸಹಾಯಕರು	–	922
	ಹುದ್ದೆ	3) ರಾತ್ರಿ ಕಾವಲುಗಾರರು	–	303
		ಒಟ್ಟು	**-**	**2849**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

I	ಸಮೂಹ –ಸಿ ಹುದ್ದೆ	1) ವಿದ್ಯಾರ್ಥಿನಿಲಯ ಮೇಲ್ವಿಚಾರಕರು	–	77
II	ಸಮೂಹ ಡಿ ಹುದ್ದೆ	1) ಅಡುಗೆಯವರು	–	192
		2) ಅಡುಗೆ ಸಹಾಯಕರು	–	95
		3) ರಾತ್ರಿ ಕಾವಲುಗಾರರು	–	42
		ಒಟ್ಟು	–	329

(ಈ) ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಖಾಲಿ ಇರುವ ಸಮೂಹ ಸಿ ಹುದ್ದೆಗಳಲ್ಲಿ ಸೀನಿಯರ್ ವಾರ್ಡನ್ 27 ಹುದ್ದೆಗಳನ್ನು, 250 ವಾರ್ಡನ್ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉಳಿದ 199 ವಾರ್ಡನ್ ವೃಂದದ ಹುದ್ದೆಗಳನ್ನು 2ನೇ ಹಂತದಲ್ಲಿ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಉಳಿದ ಸಮೂಹ–ಡಿ ಹುದ್ದೆಗಳನ್ನು ಹೊರ ಸಂಪನ್ಮೂಲದಿಂದ ಭರ್ತಿ ಮಾಡಲು ಸಹ ತಿಳಿಸಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಖಾಲಿ ಇರುವ 406 ಸಮೂಹ ಸಿ ಮತ್ತು ಸಮೂಹ ಡಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

(ಉ) ಹೌದು

2008–09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳ ಭೋಜನಾ ವೆಚ್ಚದ ಮಾಹೆಯಾದ ದರವನ್ನು ಮೆಟ್ರಿಕ್ ಪೂರ್ವ ವಸತಿ ನಿಲಯ ವಿದ್ಯಾರ್ಥಿಗಳಿಗೆ ರೂ.450/– ರಿಂದ ರೂ. 600/–ಕ್ಕೆ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯ ವಿದ್ಯಾರ್ಥಿಗಳಿಗೆ ರೂ.500/– ರಿಂದ ರೂ.650/–ಕ್ಕೆ ಹೆಚ್ಚಿಸಲು ಘೋಷಿಸಲಾಗಿದ್ದು, ಈ ಕುರಿತು ಶೀಘ್ರದಲ್ಲಿ ಆದೇಶ ಹೊರಡಿಸಲಾಗುವುದು.

ಪ್ರಶ್ನೆ ಸಂಖ್ಯೆ 68

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಹೆಚ್.ಸಿ. ಶಿವಲಿಂಗೇಗೌಡರು (ಹೆಚ್.ಕೆ. ಕುಮಾರ ಸ್ವಾಮಿಯವರ ಪರವಾಗಿ) ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರ ಬಂದಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯತಕ್ಕಂತಹ ಹಾಸ್ಟೆಲ್‌ಗಳಲ್ಲಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಯತಕ್ಕಂತಹ ವಿದ್ಯಾರ್ಥಿನಿಲಯಗಳಲ್ಲಿ ಏನು ಇವತ್ತು ಸ್ವಚ್ಛತೆಗೆ ಆದ್ಯತೆ ಕೊಡಬೇಕೆಂದು ಭಾವನೆ ಇದೆ ಅಲ್ಲಿ ಇವತ್ತು ಡಿ ಗ್ರೂಪ್ ನೌಕರರು ಮತ್ತು ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕಂಥವರು ಇಲ್ಲದೇ ಹೋದರೆ ಬಹುಶ: ವಿದ್ಯಾರ್ಥಿನಿಲಯಗಳ ಗತಿ ಏನಾಗಬೇಕು ಎನ್ನತಕ್ಕಂತಹ ವಿಚಾರದಲ್ಲಿ ನಾವು ಪ್ರಸ್ತಾಪ ಮಾಡತಕ್ಕಂತಹ ಸಂದರ್ಭದಲ್ಲಿ 3,278 ಜನ ನೌಕರರು ಇವತ್ತು ಅಲ್ಲಿ ನಿರ್ವಹಣೆ ಮಾಡಲಿಕ್ಕೆ ಖಾಲಿ ಇದ್ದಾರೆಂದರೆ ಇದರ ಪರಿಸ್ಥಿತಿ ಏನು? ಗಾಂಭೀರ್ಯತೆ ಏನು? ಎನ್ನುವುದರ ಬಗ್ಗೆ ತಾವು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಈಗಾಗಲೇ ಸ್ವಲ್ಪಮಟ್ಟಿಗೆ ಲೋಕಸೇವಾ ಆಯೋಗಕ್ಕೆ ಕಳುಹಿಸಿದ್ದೇವೆ ಆಗುತ್ತದೆ ಎನ್ನುವ ಮೇಲ್ಜಾರಿಕೆ ಉತ್ತರವನ್ನು ನೀಡಿದ್ದಾರೆ. ಇದು ಬಹುಶ: ಸಾಮಾಜಿಕ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ, ವಿದ್ಯಾರ್ಥಿನಿಲಯಗಳಲ್ಲಿ ಶುದ್ಧತೆ ಕಾಪಾಡುವಲ್ಲಿ ಏನೂ ಅಜಾಗರೂಕತೆ ಇದೆ...

ಅಧ್ಯಕ್ಷರು: ಪ್ರಶ್ನೆ ಕೇಳಿ, ಭಾಷಣ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಶಿವಲಿಂಗೇಗೌಡ: ಆಮೇಲೆ ಸಮೂಹ ಡಿ ಗ್ರೂಪ್‌ನ್ನು ಹೊರ ಸಂಪನ್ಮೂಲಗಳಿಂದ ನೇಮಸಿಕೊಳ್ಳುತ್ತೇವೆಂದು ಹೇಳಿದ್ದೀರಿ. ಹೊರಸಂಪನ್ಮೂಲವೆಂದರೆ ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಯಾವ ಸಂಪನ್ಮೂಲದಿಂದ ನೀವು ನೇಮಕ ಮಾಡಿಕೊಳ್ಳುತ್ತೀರಿ? ಆದಷ್ಟು ಬೇಗ ಎಷ್ಟು ಜಾಗ್ರತೆಯಿಂದ ನೇಮಿಸುತ್ತೀರಿ? ಸ್ವಚ್ಛತೆ ಇಲ್ಲದಿರುವುದರಿಂದ ಮಾನಸಿಕವಾಗಿ ವಿದ್ಯಾರ್ಥಿಗಳಿಗೆ ಅವ್ಯವಸ್ಥೆ ಉಂಟಾಗುತ್ತದೆ. ಅದಕ್ಕೋಸ್ಕರವಾಗಿ ವಿದ್ಯಾರ್ಥಿಗಳೇ ಕಸ ಗುಡಿಸಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಮೇಲ್ವಿಚಾರಕರು ಇಲ್ಲದೇ ಅಲ್ಲಿ ಸರಿಯಾದ ವ್ಯವಸ್ಥೆಯಾಗುತ್ತಿಲ್ಲ. ದಯಮಾಡಿ ಮೇಲ್ವಿಚಾರಕರನ್ನು ಯಾವಾಗ ನೇಮಿಸುತ್ತೀರಿ? ಹೊರ ಸಂಪನ್ಮೂಲ ಎಂದರೆ ಎನ್ನುವ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ಹೆಚ್.ಡಿ ರೇವಣ್ಣ: 2800 ಹುದ್ದೆಗಳು ಖಾಲಿ ಇದೆ. ಉದಾಹರಣೆಗೆ ಅಡುಗೆಯವರು 1,148, ಅಡುಗೆ ಸಹಾಯಕರು 922, ರಾತ್ರಿ ಕಾವಲುಗಾರರು 302,

ವಾರ್ಡನ್ 449, ಬೇಕಾದರೆ ರಾತ್ರಿ ಕಾವಲುಗಾರನ್ನು ನೇಮಿಸದೇ ಇರಬಹುದು. ಜೂನಿಯರ್ ವಾರ್ಡನ್‌ಗಳು ಇರಲಿ. ಆದರೆ, ಅಡುಗೆ ಸಹಾಯಕರು ಮತ್ತು ಅಡುಗೆಯವರನ್ನು ಕೂಡಲೇ ನೇಮಕ ಮಾಡಲು ಕ್ರಮ ಕೈಗೊಳ್ಳಬೇಕು. ಏಕೆಂದರೆ, ಹಾಸ್ಟೆಲ್ ಇದ್ದು ಅಡುಗೆ ಸಹಾಯಕರೇ ಇಲ್ಲದೇ ಹೋದರೆ ಹಾಸ್ಟೆಲ್‌ನವರು ಏನು ಪುಕ್ಕಟೆ ಲೆಕ್ಕ ಬರೆಯುತ್ತಿದ್ದಾರೆಯೇ ಎಂಬ ಅನುಮಾನ ನನಗೆ ಬರುತ್ತದೆ. ಅದಕ್ಕೋಸ್ಕರ ಸನ್ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಬೇಕಾಗಿದೆ. ಏಕೆಂದರೆ, ಅಡುಗೆಯವರೆ ಇಲ್ಲವೆಂದರೆ ನೀವು ಹಾಸ್ಟೆಲ್‌ಗಳನ್ನು ಹೇಗೆ ಮಂಜೂರು ಮಾಡಿದಿರಿ? Atleast ಕೂಡಲೇ ಅಡುಗೆಯವರನ್ನು ನೇಮಕ ಮಾಡಬೇಕು. ಕೆಲವು ಕಡೆ ಜಿಲ್ಲಾ ಮಟ್ಟದಲ್ಲಿ ಇವತ್ತು ಬಹುತೇಕ ವಿದ್ಯಾರ್ಥಿಗಳಿಗೆ ಸೀಟು ಇಲ್ಲ. ಆ ಸೀಟುಗಳನ್ನು ಹೆಚ್ಚಳ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಇಲಾಖೆ ಸಚಿವರು): ಈಗಾಗಲೇ ಹೊರಸಂಪನ್ಮೂಲಗಳಿಂದ ಖಾಲಿ ಇರುವಂತಹ ಜಾಗಗಳನ್ನು ಭರ್ತಿ ಮಾಡಲಿಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ಮುಂದಿನ ದಿನಗಳಲ್ಲಿ ಅವರನ್ನು ಖಾಯಂ ಮಾಡುವಂತೆ ಆರ್ಥಿಕ ಇಲಾಖೆಗೆ ಈಗಾಗಲೇ ಪ್ರಸ್ತಾವವನ್ನು ಮಂಡಿಸಿದ್ದೇವೆ.

ಶ್ರೀ ಹೆಚ್.ಡಿ ರೇವಣ್ಣ: ಹೊರ ಸಂಪನ್ಮೂಲ ಎಂದರೆ ಏನು?

ಶ್ರೀ ಡಿ.ಸುಧಾಕರ್: out source..

(ಗೊಂದಲ)

ಶ್ರೀ ಹೆಚ್.ಡಿ ರೇವಣ್ಣ: ಆರ್ಥಿಕ ಇಲಾಖೆಗೆ ಕಡತ ಹೋಗಿ ಎಷ್ಟು ದಿನಗಳಾಯಿತು? ಇನ್ನು ಎಷ್ಟು ದಿನ ಬೇಕಾಗುತ್ತದೆ? ಆರ್ಥಿಕ ಇಲಾಖೆಯವರು ಅಡುಗೆ ಮಾಡುವವರನ್ನು ನೇಮಕ ಮಾಡುವುದು ನಿಲ್ಲಿಸುವುದಾದರೆ ಹಾಸ್ಟೆಲ್‌ಗಳನ್ನು ಮುಚ್ಚಬೇಕಾಗುತ್ತದೆ. ಎಷ್ಟು ದಿವಸದೊಳಗಾಗಿ ನೇಮಕ ಮಾಡುತ್ತಾರೆ ಎನುವುದನ್ನು ಖಡಾ ಖಂಡಿತವಾಗಿ ಹೇಳಬೇಕು. ಏಕೆಂದರೆ, ಅಡುಗೆಯವರು ಇಲ್ಲದೇ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳು ಹೇಗೆ ಇರುತ್ತಾರೆ. ಹಾಗಾದರೆ ಹಾಸ್ಟೆಲ್‌ಗಳನ್ನು close ಮಾಡಿ. ದಯಮಾಡಿ ನೀವು ಆರ್ಥಿಕ ಇಲಾಖೆ ಮೇಲೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಡಿ.ಸುಧಾಕರ್: ಆದಷ್ಟು ಬೇಗ ಹಾಸ್ಟೆಲ್‌ಗೆ ಏನು ತೊಂದರೆಯಾಗುತ್ತದೆ ಅದನ್ನು ಖಂಡಿತವಾಗಿಯೂ ಸರಿಪಡಿಸಲಿಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಸದಸ್ಯರಿಗೆ ತಿಳಿಸಲಿಚ್ಚಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾವು ಹೊಸಬರು ಹೊರ ಸಂಪನ್ಮೂಲ ಎಂದರೇನು ಹೇಳಬೇಕು.

ಅಧ್ಯಕ್ಷರು: ಅವರು ಕೂಡ ಹೊಸದಾಗಿ ಮಂತ್ರಿಗಳಾಗಿದ್ದಾರೆ ತಿಳಿದುಕೊಂಡು ಹೇಳುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರು ಹೊರ ಸಂಪನ್ಮೂಲ ಎಂದರೇನೆಂದು ತಿಳಿದುಕೊಂಡು ಹೇಳಲಿ. ಉತ್ತರ ಕೊಟ್ಟಿರುವವರು ಅಧಿಕಾರಿಗಳು. ನಾವು ಹೊಸಬರು ಮಾನ್ಯ ಮಂತ್ರಿಗಳು ಕೂಡ ಹೊಸಬರು ನಾವು ಇದನ್ನು ಒಪ್ಪುತ್ತೇವೆ. ಆದರೆ, ನುರಿತಂಥ ಅಧಿಕಾರಿಗಳು ಕೊಟ್ಟಿರತಕ್ಕಂಥ ಉತ್ತರವಾಗಿರುವುದರಿಂದ ಅದರ ಬಗ್ಗೆ ಅವರು ಹೇಳಬೇಕು. ಏಕೆಂದರೆ, ಸದನವನ್ನು ತಪ್ಪು ದಾರಿಗೆ ಎಳೆಯಬಾರದು. ಮಂತ್ರಿಗಳ ಹತ್ತಿರ ಸುಳ್ಳು ಹೇಳಿಸಬಾರದು. ದಯವಮಾಡಿ ಉತ್ತರ ಕೊಡುವಾಗ ನಿರ್ದಿಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ದಯಮಾಡಿ ಈ ಹೊರಸಂಪನ್ಮೂಲ ಎಂದರೇನು ಎಂಬುದನ್ನು ನಾವು ತಿಳಿದುಕೊಂಡಿಲ್ಲ.

ಅಧ್ಯಕ್ಷರು: ಹೊಸದಾಗಿ ಮಂತ್ರಿಗಳಾಗಿದ್ದಾರೆ ಅವರು ನೆಕ್ಸ್ಟ್ ತಿಳಿದುಕೊಂಡು ಹೇಳುತ್ತಾರೆ ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರು ಹೊಸಬರು ನಾವು ಹೊಸಬರು. ಅದು ಬೇರೆ ಪ್ರಶ್ನೆ. ಆದರೆ, ಹೊರ ಸಂಪನ್ಮೂಲ ಎಂದರೇನು? ಅದು ಎಲ್ಲಿದೆ? ಅದು ಹೇಗೆ ಬರುತ್ತದೆ? ಯಾವಾಗ ತೆಗೆದುಕೊಳ್ಳುತ್ತೀರಿ? ದಯಮಾಡಿ ಹೇಳಿ. ಈ ಅಧಿಕಾರಿಗಳು ಉತ್ತರ ಕೊಡುವಾಗ, ಅವನ್ಯಾರೋ ಎಮ್ಎಲ್ಎ ಕ್ವಶ್ಚನ್ ಹಾಕಿದ್ದಾನೆ ನೋಡುತ್ತೇನೆಂದೋ ಅಥವಾ ಉದಾಸೀನವಾಗಿ ಉತ್ತರ ಕೊಡುವುದನ್ನು ನಾನು ಸದನದಲ್ಲಿ ಕುಳಿತುಕೊಂಡು ನೋಡುತ್ತಿದ್ದೇನೆ. ಬಹಳವಾಗಿ ಈ ಅಧಿಕಾರಿಗಳ ಅಸಡ್ಡೆಯ ಉತ್ತರ ಪರಿಶೀಲಿಸಲಾಗುವುದು ಎಂದು ಹೇಳಿ ಬಿಡುತ್ತಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ: ಇದು ಹೊಸ ಮಂತ್ರಿಗಳಿಗೆ ಮತ್ತು ಹೊಸ ಸದಸ್ಯರಿಗೆ ಅರ್ಥವಾಗದಿರಲಿ ಎಂದು ಆ ಶಬ್ದ ಹೇಳಿದ್ದಾರೆ.

ಅಧ್ಯಕ್ಷರು: ಶಿವಲಿಂಗೇಗೌಡ್ರೆ ಸಾಕು ಬಿಡಿ. ರೋಷನ್ ಬೇಗ್‌ರವರೇ ತಾವು ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಹಾಗಾದರೆ ಕ್ವಶ್ಚನ್ ಏಕೆ ಹಾಕಬೇಕು ಹೇಳಿ. ಹೊರ ಸಂಪನ್ಮೂಲ ಎಂದರೇನೆಂದು ನುರಿತಂಥ ಮಂತ್ರಿಗಳಿಂದಾದರೂ ಹೇಳಿಸಿಬಿಡಿ. ಇಲ್ಲಾಂದ್ರೆ ನೀವೇ ಹೇಳಿಬಿಡಿ. ಸನ್ಮಾನ್ಯ ಸಭಾಧ್ಯಕ್ಷರೇ ಹೇಳಿಬಿಡಿ.

ಅಧ್ಯಕ್ಷರು: ಮಾನ್ಯ ಸುಧಾಕರ್‌ರವರೇ ಅದರ ಬಗ್ಗೆ ತಿಳಿದುಕೊಂಡು ಅವರಿಗೆ ಡಿಟೇಲ್ಸ್ ಕಳುಹಿಸಿ ಕೊಡಿ.

ಶ್ರೀ ಡಿ. ಸುಧಾಕರ್: ಅವರಿಗೆ ಎಲ್ಲಾ ಮಾಹಿತಿಗಳನ್ನು ಕಳುಹಿಸಿ ಕೊಡಲಾಗುವುದು.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಸಚಿವರಿಗೆ ತರಬೇತಿ ಕೊಡಿಸಿ. ಏಕೆಂದರೆ, ಸಡನ್ ಅಗಿ ಮಂತ್ರಿಗಳಾದವರು ಇದ್ದಾರೆ.

ಅಧ್ಯಕ್ಷರು: ಬಿ.ಸಿ. ಪಾಟೀಲ್ ರವರೆ ಸಾಕು ಬಿಡಿ. ಮಾನ್ಯ ಶಾಸಕರಿಗೂ ಹಾಗೂ ಮಾನ್ಯ ಸಚಿವರಿಗೂ ತರಬೇತಿ ಕೊಡಿಸೋಣ. ಆಯಿತು ಇಬ್ಬರಿಗೂ ಕೊಡಿಸೋಣ. ರೋಷನ್ ಬೇಗ್ ರವರೆ ತಾವು ಪ್ರಶ್ನೆ ಕೇಳಿ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

67:– ಶ್ರೀ ರೋಷನ್ ಬೇಗ್.ಆರ್.:– ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೌರಿಂಗ್ ಆಸ್ಪತ್ರೆಯಲ್ಲಿ ಔಷಧಿಗಳು ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಔಷಧಿಗಳು ಇದ್ದರೂ ಅದನ್ನು ಸಾರ್ವಜನಿಕರಿಗೆ ವಿತರಿಸದೆ ದುರುಪಯೋಗವಾಗುತ್ತಿವೆಯೆ;

(ಇ) ಬೌರಿಂಗ್ ಆಸ್ಪತ್ರೆಯಲ್ಲಿ ಐಸಿಯು ವಿಭಾಗದಲ್ಲಿ ವೆಂಟಿಲೇಟರ್ ಸೌಲಭ್ಯವಿದೆಯೇ;

(ಈ) ವೆಂಟಿಲೇಟರ್ ಸೌಲಭ್ಯವಿದ್ದು, ಅದನ್ನು ಸದುಪಯೋಗಪಡಿಸಲಾಗುತ್ತಿದೆಯೆ;

(ಉ) ಈ ಸೌಲಭ್ಯವಿಲ್ಲದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು?

ಬಿ. ಶ್ರೀರಾಮುಲು (ವೈದ್ಯಕೀಯ ಶಿಕ್ಷಣ ಸಚಿವರು):–

(ಅ) ಬಂದಿದೆ.

(ಆ) ಇಲ್ಲ

(ಇ) ಬೌರಿಂಗ್ ಆಸ್ಪತ್ರೆಯಲ್ಲಿ ಐ.ಸಿ.ಯು ವಿಭಾಗ ಇಲ್ಲ

(ಈ) ಉದ್ಭವಿಸುವುದಿಲ್ಲ.

(ಉ) ಈಗ ಐ.ಸಿ.ಯು. ಸ್ಥಾಪನೆಗೆ ಅಗತ್ಯ ಹಣ ಬಿಡುಗಡೆಗೆ ಆದೇಶ ಮಾಡಲಾಗಿದೆ.